(ಗೊಂದಲ)

ಉಪಾಧ್ಯಕ್ಷಿಣಿಯವರು:- ಈಗ ಯಾವುದೂ ಕೂಡ ಕಡತಕ್ಕೆ ಹೋಗುವುದಿಲ್ಲ.

(ಮಾನ್ಯ ಸದಸ್ಯರುಗಳಾದ ಶ್ರಿ ಬಿ.ಎಸ್.ಯಡಿಯೂರಪ್ಪ, ಶ್ರಿ ಕೆ.ಎಸ್.ಈಶ್ವರಪ್ಪ, ಶ್ರಿ ಎ.ರುಕ್ಮಯ್ಯ ಪೂಜಾರಿ, ಶ್ರಿ ನಾರಾಯಣ ರಾವ್ ಮನಹಳ್ಳಿ ಅವರುಗಳು ಸಭಾತ್ಯಾಗ ಮಾಡಿದರು)

ಶ್ರಿಮತಿ ಕೆ.ಎಸ್.ನಾಗರತ್ನಮ್ಮ (ಯೋಜನಾ ಸಚಿವರು ಇವರಿಂದ ಉತ್ತರ)

+ ಶ್ರಿಮತಿ ಕೆ.ಎಸ್.ನಾಗರತ್ನಮ್ಮ(ಯೋಜನಾ ಸಚಿವೆಯವರು):-ಮಾನ್ಯ ಉಪಾಧ್ಯಕ್ಷಿಣಿಯವರೆ, ದಯಮಾಡಿ ಎಲ್ಲಾ ಸದಸ್ಯರು ಕುಳಿತುಕೊಳ್ಳಬೇಕು, ನಾನು ಬೇಗನೆ ನನ್ನ ಭಾಷಣವನ್ನು ಮುಗಿಸುತ್ತೇನೆ. ನಿಮಗೆಲ್ಲರಿಗೂ ಹೊಟ್ಟೆ ಹಸಿದಿರಬಹುದು. ನಾನು 4 ಗಂಟೆಯೊಳಗೆ ನನ್ನ ಭಾಷಣವನ್ನು ಮುಗಿಸುತ್ತೇನೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ ಆರು ಜನ ಶಾಸಕ ಸಹೋದರರು ಅವರ ಅಭಿಪ್ರಾಯ ಮತ್ತು ಸಲಹೆಯನ್ನು ನೀಡಿದ್ದಾರೆ. ಅವರೆಲ್ಲರಿಗೂ ಕೂಡ ನಾನು ಆಭಾರಿಯಗಿದ್ದೇನೆ.

ಕಳೆದ ದಶಕದಲ್ಲಿ ಯೋಜನೆಗೆ ತೊಡಗಿಸತಕ್ಕ ಬಂಡವಾಳದ ಪ್ರಮಾಣ ಬಹಳ ಇಳಿಮುಖವಾಗಿದೆ. ಎಲ್ಲಾ ರಾಜ್ಯಗಳ ಯೋಜನೆಯ ಮೊತ್ತದಲ್ಲಿ ಕರ್ನಾಟಕದ ಪಾಲು 5ನೇ ಯೋಜನೆಯಲ್ಲಿ 5.5, 6ನೇ ಯೋಜನೆಯಲ್ಲಿ 4.8,7ನೇ ಯೋಜನೆಯಲ್ಲಿ 4ರಂತೆ ಇಳಿದಿತ್ತು. ಈ ಪ್ರಮಾಣವು 1992-93ರ ಪ್ಲಾನ್‌ನಲ್ಲಿ ಮುಂದುವರೆದು ಈಗ ನಮ್ಮ ಯೋಜನೆಯ ಗಾತ್ರ 2159 ಕೋಟಿಯಾಗಿದೆ. ಈ ರೀತಿ ಯೋಜನೆಯಲ್ಲಿ ಹೆಚ್ಚು ಬಂಡವಾಳವನ್ನು ತೊಡಗಿಸುವುದರಲ್ಲಿ ರಾಷ್ಟ್ರದಲ್ಲಿ ಕರ್ನಾಟಕದ್ದು ಬಹಳ ವಿಶೇಷವಾದ ವಿಚಾರವಾಗಿದೆ. ರಾಜ್ಯದ ಉತ್ಪಾದನೆ ಹೆಚ್ಚಾಗಬೇಕಾದರೆ ಯೋಜನೆಯಲ್ಲಿ ಹೆಚ್ಚಿನ ಬಂಡವಾಳವನ್ನು ತೊಡಗಿಸಬೇಕು. ಕೇವಲ ಸಂಬಳ ಸಾರಿಗೆ ಮುಂತಾದುವುಗಳಿಗೆ ಹಣವನ್ನು ಖರ್ಚು ಮಾಡಿದರೆ ಆರ್ಥಿಕ ಅಭಿವೃದ್ಧಿಯಾಗಲು ಸಾಧ್ಯವಾಗುವುದಿಲ್ಲ ಎನ್ನುವುದು ಎಲ್ಲರಿಗೂ ಕೂಡ ಗೊತ್ತಿರತಕ್ಕ ವಿಚಾರ. ದೊಡ್ಡ ಯೋಜನೆ ಎಂದರೆ ಹೆಚ್ಚು ಬಂಡವಾಳದ ಹೂಡಿಕೆ, ಆ ಮೂಲಕ ರಾಜ್ಯದ ಅಸೆಟ್ಸ್‌ನ್ನು ಹೆಚ್ಚಿಸಲು, ಕ್ರಿಯೇಟ್ ಮಾಡಲು ಸಾಧ್ಯವಾಗುತ್ತದೆ. ನಮಗೆ ಬರೇ ಭತ್ಯೆ ಸಂಬಳಸಾರಿಗೆಗೆ ಖರ್ಚು ಮಾಡಿ ಹಣವನ್ನು ಹಾಳುಮಾಡತಕ್ಕದ್ದು ಬೇಕಾಗಿಲ್ಲ. ನಮ್ಮ ಪ್ರಯತ್ನದ ಫಲ ಯೋಜನೆ, ಯೋಜನೆಯ ಮುಖಾಂತರ ರಾಜ್ಯದ ಜನರಿಗೆ ತಲುಪಬೇಕು, ಅವರಿಗೆ ಒಳ್ಳೆಯದಾಗಬೇಕು ಎನ್ನುವುದೇ ನಮ್ಮ ಉದ್ದೇಶ. ಈ ಕೆಲಸವನ್ನು ಬಹಳ ಜಾಗರೂಕತೆಯಿಂದ ಮಾಡುತ್ತಿದ್ದೇವೆ. ಈ ಸಲದ ಯೋಜನೆಯಲ್ಲಿ ನೀರಾವರಿಗೆ, ಪವರ್‌ಗೆ, ಶಿಕ್ಷಣಕ್ಕೆ, ಗೃಹನಿರ್ಮಾಣಕ್ಕೆ ಜಾಸ್ತಿ ಆದ್ಯತೆಯನ್ನು, , ಒತ್ತನ್ನು ಕೊಟ್ಟಿದ್ದೇವೆ.

1990-91ರಲ್ಲಿ ನೀರಾವರಿಗೆ 211.33 ಕೋಟಿ ಇದ್ದರೆ 1991-92ರಲ್ಲಿ 247.13ಇತ್ತು. ಇದು 6.9 ಪರ್‌ಸೆಂಟ್ ಆಯಿತು. ನಾವು 1992-93 ರಲ್ಲಿ 349.85 ಕೋಟಿ ಹೆಚ್ಚಿಗೆ ಮಾಡಿದ್ದೇವೆ.

1990-91 ರಲ್ಲಿ ಪವರ್‌ಗೆ 276 ಕೋಟಿ ಇದ್ದರೆ 1991-92ರಲ್ಲಿ 372.13, 1992-93ರಲ್ಲಿ 495.57 ಇದೆ.

1990-91ರಲ್ಲಿ ಕೈಗಾರಿಕೆಗಳಿಗೆ 76.44 ಇದ್ದರೆ 1991-92 ರಲ್ಲಿ 107.67 ಕೋಟಿ ಇತ್ತು. ಈಗ1992-93 ರಲ್ಲಿ 76.82 ಇದೆ.

1990-91 ರಲ್ಲಿ ಶಿಕ್ಷಣಕ್ಕೆ 71.55 ಇದ್ದರೆ 1991-92ರಲ್ಲಿ 98.41 ಇತ್ತು 1992-93ರಲ್ಲಿ 205.46 ಇದೆ.

ಆರೋಗ್ಯ ಇಲಾಖೆಯಲ್ಲಿ 1990-91ರಲ್ಲಿ 41.52 ಇದ್ದರೆ 1991-92 ರಲ್ಲಿ 47ಇದೆ, 1992-93ರಲ್ಲಿ 68.46 ಇದೆ. ಹೌಸಿಂಗ್‌ನಲ್ಲಿ 1990-91 ರಲ್ಲಿ 29.32 ಇದ್ದರೆ 1991-92ರಲ್ಲಿ 55.56 ಇದೆ, 1992-93ರಲ್ಲಿ 118.10 ಇದೆ. ಇಷ್ಟರಮಟ್ಟಿಗೆ ನಾವು ಜಾಸ್ತಿ